ಬರುತ್ತೇವೆಂದು, ಹೇಳಿ ಕಾಡಿನ ಅಂಚಿನಲ್ಲಿದ್ದು ತಮ್ಮ ಅಭಿವೃದ್ಧಿಯನ್ನು ಪುನರ್‌ವಸತಿಯನ್ನು ಮಾಡುತ್ತಾರೆ, ಅವರಿಗೆ ನಾವು ಅನುಕೂಲವನ್ನು ಮಾಡಿಕೊಡತ್ತೇವೆ. ಕಾಡಿನ ಒಳಗಡೆ ಇರುವರಿಗೂ ಕೂಡ ನಾವು ಅನುಕೂಲವನ್ನು ಮಾಡಿ, ಅವರಿಗೆ ಪಟ್ಟಾ ಕೊಡುವಂತಹ ಕೆಲಸ, ಸಾಗುವ ಚೀಟಿ ಕೊಡುವಂಥಾದ್ದು ಮಾಡುತ್ತೇವೆನ್ನುವಂಥಾದ್ದು ಆಗಿದೆ. ಇನ್ನು ಅಕ್ರಮ ಸಕ್ರಮ ಸಮಿತಿಯ ರಚನೆಯಾಗಬೇಕಾಗಿರುವಂಥಾದ್ದರಲ್ಲಿ ಅಲ್ಲಿ ಎ.ಸಿ. ಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿ, ತತ್ ತಕ್ಷಣದಲ್ಲಿ ಅದು ವರದಿಯನ್ನು ಕೊಡಬೇಕೆಂಬ ವಿಚಾರಣವನ್ನು ಪ್ರಸ್ತಾಪಿಸಲಾಯಿತು. ಆದರೆ ತಮಗೆ ಗೊತ್ತಿರುವಂತೆ, ಬಗರ್ ಹುಕುಂಗೆ ಸಂಬಂಧಪಟ್ಟಂತೆ ಸಾಗುವಳಿ ಚೀಟಿಯನ್ನು ಕೊಡುವಂತಹದ್ದು ಶಾಸಕರುಗಳ ಅಧ್ಯಕ್ಷತೆಯಲ್ಲೇ ನಡೆಯಬೇಕೆಂಬ ಕಾರಣವಿರುವುದರಿಂದ, ನಾವು ಇದನ್ನು ಏಪ್ರಿಲ್ ತಿಂಗಳಲ್ಲಿ ಮಾಡುತ್ತೇವೆ. ಇದನ್ನು ಕಾನೂನು ಮಾಡಿದಾಗ, ಅದು ಕೇವಲ ಚಿಕ್ಕಮಗಳೂರು ಜಿಲ್ಲೆಗೆ ಮಾತ್ರ ಸೀಮಿತವೆಂದು ಹೇಳುವುದಕ್ಕೆ ಆಗುವುದಿಲ್ಲ. ಈ ವಿಚಾರದಲ್ಲಿ ಎಲ್ಲಾ ಶಾಸಕರುಗಳು ತಮ್ಮ ಆಕ್ಷೇಪಣೆಗಳನ್ನು ಎತ್ತಬಹುದು. ಆ ಕಾರಣಕ್ಕಾಗಿ, ಶಾಸಕರುಗಳ ಅಧ್ಯಕ್ಷತೆಯಲ್ಲಿ ಈ ಸಾಗುವಳಿ ಚೀಟಿಯನ್ನು ಕೊಡುವಂತಹ ವಿಚಾರವೇನು ಇದೆ, ಅದು ಚಿಕ್ಕಮಗಳೂರು ಜಿಲ್ಲೆಯಾಗಿರಬಹುದು, ಅಥವಾ ಬೇರೆ ಕಡೆ ಆಗಿರಬಹುದು. ಅದನ್ನು ನಾವು ಏಪ್ರಿಲ್ ತಿಂಗಳಲ್ಲಿ, ಪ್ರಾರಂಭ ಮಾಡುತ್ತೇನ್ನುವಂತಹ ಮಾತನ್ನು ಅನೌಪಚಾರಿಕ ಮತ್ತು ಔಪಚಾರಿಕ ಸಭೆಗಳಲ್ಲಿ ಪ್ರಸ್ತಾಪ ಮಾಡಿದ್ದೇವೆ. ಮಾನ್ಯ ಚಿರಂಜೀವಿ ಸಿಂಗ್‌ರವರು ಕೂಡ ಅಲ್ಲಿಗೆ ಹೋಗಿ ನಕ್ಸಲಿಯರ ಸಮಸ್ಯೆಯ ಸಂಬಂಧಪಟ್ಟ ವಿಚಾರದಲ್ಲಿಯೂ ಕೂಡ ತಮ್ಮ ವರದಿಯನ್ನು ಕೊಟ್ಟಿದ್ದಾರೆ. ಆ ಹಿನ್ನಲೆಯಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ನಾವು ತತ್‌ಕ್ಷಣದಲ್ಲಿ ಕೈಗೊಳ್ಳುತ್ತೇನ್ನುವಂತಹ ಮಾತನ್ನು ಹೇಳುತ್ತೇನೆ.

ಶ್ರೀ ಎಂ.ಪಿ. ಕುಮಾರಸ್ವಾಮಿ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಯವರು ಕೊಟ್ಟಂತಹ ಉತ್ತರದಿಂದ ನನಗೆ ಸಮಾಧಾನವಾಗಲಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ತಾವು ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೀರಿ. ನಾವು ಉತ್ತರವನ್ನು ಹೇಳಿದ್ದೇವೆ.

+ (ಎ) ವಿಷಯ: ಬೇರೆ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿಯೂ ಸ್ಟ್ಯಾಂಪ್ ಪೇಪರ್‌ನ ವಿತರಣೆ ವ್ಯವಸ್ಥೆ ಬಗ್ಗೆ

ಶ್ರೀ ಕೆ. ಪ್ರಭಾಕರ್ ಬಂಗಾರ (ಬೆಳ್ತಂಗಡಿ): ಮಾನ್ಯ ಉಪಾಧ್ಯಕ್ಷರೇ, ಹಿಂದಿನ ಸರ್ಕಾರವಿದ್ದಾಗ ನಕಲಿ ಛಾಪಾ ಕಾಗದದ ಹಗರಣದ ಹಿನ್ನಲೆಯಲ್ಲಿ ಸ್ಟಾಂಪ್ ಪೇಪರ್ ಅನ್ನು ಸ್ಟಾಂಪ್ ವೆಂಡರ್‌ಗಳ ಮೂಲಕ ಮಾರಾಟ ಮಾಡುವಂಥಾದ್ದನ್ನು ರದ್ದು ಮಾಡಿತ್ತು. ತದನಂತರ ಸರ್ಕಾರ ರಾಷ್ಟ್ರೀಕೃತ ಬ್ಯಾಂಕ್‌ಗಳ ಮೂಲಕ ಉದಾಹರಣೆಗೆ ನಮ್ಮ ಕ್ಷೇತ್ರದಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್‌ನ ಮೂಲಕ ಆ ವ್ಯವಹಾರ ನಡೆಯುವಂತೆ ಮಾಡಿತ್ತು. ಇದರಿಂದ ನಮ್ಮ ಬೆಳ್ತಗಂಡಿ ತಾಲ್ಲೂಕಿನ ಜನಸಾಮಾನ್ಯರಿಗೆ ತುಂಬಾ ತೊಂದರೆಯಾಗುತ್ತಿದೆ. ಇಲ್ಲಿ ಮೂಲೆ ಮೂಲೆಯಿಂದ

+ಮಾನ್ಯ ಸದಸ್ಯರಿಂದ ಪರಿಶೀಲಿಸಲ್ಪಟ್ಟಿದೆ.

ಬರುವಂತಹ ಸಾರ್ವಜನಿಕರು, ಆ ಸ್ಟಾಂಪ್ ಪೇಪರ್‌ಗೆ ಒಂದು ಬ್ಯಾಂಕ್‌ನ್ನು ಅವಲಂಬನೆ ಮಾಡಬೇಕಾಗಿದೆ. ಅದುದರಿಂದ ಇಲ್ಲಿ ತೊಂದರೆಯಾಗುತ್ತಿದೆ. ಇಲ್ಲಿ ನನ್ನ ವಿನಂತಿ ಏನೆಂದರೆ, ಬೇರೆ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲೂ ಕೂಡ ಈ ಸ್ಟಾಂಪ್ ಪೇಪರ್‌ನ ವಿತರಣೆ ಮಾಡುವಂಥ ವ್ಯವಸ್ಥೆಯನ್ನು ಮಾಡಿದರೆ, ಎಲ್ಲಾ ಕಡೆಗಳಲ್ಲೂ ಅನುಕೂಲವಾಗುತ್ತದೆ. ಈಗ ಕಾರ್ಪೊರೇಷನ್ ಬ್ಯಾಂಕ್ ಇರಬಹುದು, ಕರ್ನಾಟಕ ಬ್ಯಾಂಕ್ ಇರಬಹುದು, ಅವರಿಗೂ ಮಾರಾಟಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆಂಬ ವಿಚಾರವನ್ನು ಹೇಳಿದ್ದಾರೆ. ಆ ಸ್ಟಾಂಪ್ ಪೇಪರ್ ಮಾರಾಟ ಮಾಡುವಂತಹ ಅಧಿಕಾರವನ್ನು ಅವರಿಗೂ ಕೊಟ್ಟಾಗ, ಅಲ್ಲಿ ಅನುಕೂಲವಾಗುತ್ತದೆ. ಇದರ ಜೊತೆಗೆ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ನೂರು ರೂಪಾಯಿಗಳಿಗಿಂತ ಕೆಳಗಿನ ಮೌಲ್ಯದ ಸ್ಟಾಂಪ್ ಪೇಪರ್ ಮತ್ತು ಸ್ಟಾಂಪ್‌ಗಳನ್ನು ಮಾರಾಟ ಮಾಡುವಂಥಾದ್ದಕ್ಕೆ, ಸ್ಟಾಂಪ್ ವೆಂಡರ್‌ಗಳನ್ನು ನೇಮಕ ಮಾಡಿ, ಆ ಮೂಲಕವಾಗಿ ಕೊಟ್ಟಾಗ ಎಲ್ಲರಿಗೂ ಸುಸೂತ್ರವಾಗಿ ಸ್ಟಾಂಪ್ ಪೇಪರ್‌ಗಳ ವಿತರಣೆಯಾಗುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕದಲ್ಲಿ ದಿನಾಂಕ: 1.4.2003 ರಿಂದ ಛಾಪಾ ಕಾಗದ ಬಳಕೆಯನ್ನು ಸ್ಥಗಿತಗೊಳಿಸಲಾಗಿದೆ. ಸ್ಟಾಂಪ್ ಡ್ಯೂಟಿ ಹಾಗೂ ನೋಂದಣಿ ಫೀಯನ್ನು ಸಾರ್ವಜನಿಕರಿಂದ ಸರ್ಕಾರದ ಪರವಾಗಿ ಪಾವತಿಕೊಳ್ಳಲು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ, ಕರ್ನಾಟಕ ಬ್ಯಾಂಕ್ ಹಾಗೂ ಕಾರ್ಪೊರೇಷನ್ ಬ್ಯಾಂಕ್‌ಗಳಿಗೆ ಅನುಮತಿ ನೀಡಲಾಗಿದೆ. ನೋಂದಣಿ ಮಾಡಿಸಿಕೊಳ್ಳುವ ದಸ್ತಾವೇಜುಗಳಿಗೆ ಛಾಪಾ ಕಾಗದಗಳ ಅವಶ್ಯಕತೆ ಇರುವುದಿಲ್ಲ. ನೋಂದಣಿ ಸಂಬಂಧಿಸಿದ ದಸ್ತಾವೇಜುಗಳಿಗೆ ಯಾವುದೇ ರಾಷ್ಟ್ರೀಕೃತ ಹಾಗೂ ಷೆಡ್ಯೂಲ್ ಬ್ಯಾಂಕಿನಲ್ಲಿ ಡಿ.ಡಿ. ಪೇ ಆರ್ಡರ್ ಮೂಲಕ ಹಣ ಪಾವತಿಸಿ ಉಪ ನೋಂದಣಿ ಕಛೇರಿಯಲ್ಲಿ ಹಾಜರುಪಡಿಸಿ ದಸ್ತಾವೇಜುಗಳನ್ನು ನೋಂದಾಯಿಸುವ ವ್ಯವಸ್ಥೆಯನ್ನು ಮಾಡಲಾಗಿದೆ. ನೋಂದಾವಣೆಗೆ ಐಚ್ಛಿಕವಾಗಿರುವ ದಸ್ತಾವೇಜುಗಳಿಗೆ ಸದರಿ ಬ್ಯಾಂಕಿನವರು ನೀಡುವ ದೃಢೀಕೃತ ಡಾಕ್ಯುಮೆಂಟ್ ಶೀಟ್‌ಗಳನ್ನು ಬಳಸಲಾಗುತ್ತಿದೆ. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಈ ಬ್ಯಾಂಕುಗಳು ಟ್ರೆಜರಿ ಬ್ಯಾಂಕುಗಳಾಗಿರುವುದರಿಂದ, ಅವುಗಳೊಂದಿಗೆ ಒಡಂಬಡಿಕೆಯಾಗಿದ್ದು, ಇವುಗಳ ಮೂಲಕ ಡಾಕ್ಯುಮೆಂಟ್ ಶೀಟುಗಳನ್ನು ವಿತರಿಸುವ ವ್ಯವಸ್ಥೆ ಮಾಡಲಾಗಿದೆ. ಈ ವಿಧಾನವನ್ನು ಬೇರೆ ಬೇರೆ ಬ್ಯಾಂಕುಗಳಿಗೆ ವಿಸ್ತರಿಸಲು ಅವಕಾಶವಿರುವುದಿಲ್ಲ.

ಕರ್ನಾಟಕ ಛಾಪಾ ಕಾಗದ ಬಳಕೆಯನ್ನು ಸ್ಥಗಿತಗೊಳಿಸಿರುವುದರಿಂದ ನೂರು ರೂಪಾಯಿಗಳಿಗಿಂತ ಕಡಿಮೆ ಬೆಲೆಯ ಅಥವಾ ಯಾವುದೇ ಮೌಲ್ಯದ ಛಾಪಾ ಕಾಗದಗಳನ್ನು

ಸ್ಟಾಂಪ್ ವೆಂಡರ್‌ಗಳ ಮುಖಾಂತರ ವಿತರಣೆ ಮಾಡುವ ಕ್ರಮವನ್ನು ಮರು ಜಾರಿಗೊಳಿಸುವ ವಿಚಾರ ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿ ಇದೆ.

(ಏ) ಕೆ.ಜಿ.ಎಫ್. ವಿಧಾನಸಭಾ ಕ್ಷೇತ್ರದಲ್ಲಿ ಉಪಾಧ್ಯಾಯರಿಗೆ ಸಂಬಳ ನೀಡದಿರುವ ಬಗ್ಗೆ

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್): ಮಾನ್ಯ ಉಪಾಧ್ಯಕ್ಷರೇ, ನಮ್ಮ ಕ್ಷೇತ್ರದಲ್ಲಿ ಸುಮಾರು ಒಂಡು ವರ್ಷದಿಂದ 10–15 ಟೀಚರ್‌ಗಳಿಗೆ ಸಂಬಳವನ್ನು ಕೊಟ್ಟಿಲ್ಲ. ಇದಕ್ಕೆ ಸರ್ಕಾರದವರು ಅಲ್ಲಿ ಕಡಿಮೆ ಸ್ಟೂಡೆಂಟ್‌ಗಳು ಇದ್ದಾರೆ. ಆದುದರಿಂದ ನಾವು ಸಂಬಳವನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಅಲ್ಲಿ ಒಬ್ಬ ಸ್ಟೂಡೆಂಟ್ ಇರುತ್ತಾರೋ, ಅರ್ಧ ಸ್ಟೂಡೆಂಟ್ ಇರುತ್ತರೊ, ಅದು ಮುಖ್ಯವಲ್ಲ. ಇದು ಗಂಭೀರವಾದ ವಿಚಾರ. ಮಾನ್ಯ ಮುಖ್ಯಮಂತ್ರಿಯವರು ಏನು ಹೇಳಿದ್ದಾರೆಂದರೆ, ಟೀಚರ್‌ಗಳ ಸಂಬಳವನ್ನು ನಾವು ನಿಲ್ಲಿಸುವುದಿಲ್ಲವೆಂದು ಹೇಳಿದ್ದಾರೆ. ಸ್ಟೂಡೆಂಟ್‌ಗಳು ಕಡಿಮೆ ಇದ್ದರೆ ಟೀಚರ್‌ಗಳಿಗೆ ಕೆಲಸ ಏನು ಇದೆ? Management ಸ್ಕೂಲ್ ಅದು, ಮ್ಯಾನೇಜ್‌ಮೆಂಟ್‌ನವರು ಮರ್ಜ್ ಮಾಡಬೇಕು, ಎಂದು ಹೇಳುತ್ತಾರೆ. ಅಲ್ಲಿ ಮ್ಯಾನೆಜ್‌ಮೆಂಟ್‌ನವರು ಮರ್ಜ್ ಮಾಡುವುದಿಲ್ಲ. ನಿಮ್ಮ ಡಿ.ಡಿ.ಪಿ.ಐ. ನವರು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ. ಈ ಟೀಚರ್‌ಗಳಿಗೆ ಅವರ ಮಕ್ಕಳನ್ನು ನೋಡುವುದಕ್ಕೆ ಸಾಧ್ಯವಾಗುವುದಿಲ್ಲ. ಊಟದ ವ್ಯವಸ್ಥೆಯ ಬಗ್ಗೆ ನೋಡುವುದಕ್ಕೆ ಸಾಧ್ಯವಾಗುವುದಿಲ್ಲ. They have to die. ಅದು ಯಾವ ಸ್ಕೂಲ್‌ಗಳೆಂದರೆ ಕೆ.ಜಿ.ಎಫ್. ನಲ್ಲಿ ಬಿಜಿಎಂ ಮ್ಯಾನೆಜ್‌ಮೆಂಟ್‌ನಲ್ಲಿ ನಡೆಯುತ್ತಿರುವ ಸ್ಕೂಲ್ ನಲ್ಲಿ ಸ್ಟೂಡೆಂಟ್‌ಗಳು ಇಲ್ಲವೆಂದು ಅವರಿಗೆ ಸಂಬಳ ಕೊಡುವುದನ್ನು ನಿಲ್ಲಿಸಿದ್ದಾರೆ ಇದರ ಬಗ್ಗೆ ನಾವು ಡಿಡಿಪಿಐ ನವರನ್ನು ಹೋಗಿ ಕೇಳಿದಗೆ, ನಾವು ಮ್ಯಾನೆಜ್‌ಮೆಂಟ್‌ಗೆ ಕಾಗದವನ್ನು ಬರೆದಿದ್ದೇವೆ, ಅವರು ಮರ್ಜ್ ಮಾಡಿಕೊಂಡರೆ, ಅವರಿಗೆ ಸಂಬಳವನ್ನು ರಿಲೀಜ್ ಮಾಡುತ್ತೇವೆಂದು ಹೇಳುತ್ತಾರೆ. ಮ್ಯಾನೆಜ್‌ಮೆಂಟ್‌ನವರು ನಾವು ಇನ್ನೂ ಸ್ವಲ್ಪ ಸ್ಟೂಡೆಂಟ್‌ಗಳನ್ನು ಸೇರಿಸಬೇಕು, ಅದನ್ನು ನೋಡಿಕೊಂಡು ಮಾಡುತ್ತೇವೆಂದು ಹೇಳುತ್ತಾರೆ. It is a shame on the part of the government. ಈ ಟೀಚರ್ಸ್ ಯಾರು? ನಮ್ಮನ್ನು ಈ ಸಭೆಗೆ ಕಳುಹಿಸಿರುವಂಥವರು. ಅವರ ಸಂಬಳವನ್ನು ಒಂದು ವರ್ಷ ಕಾಲ ನಿಲ್ಲಿಸಿ, ನಿಮ್ಮ ಮ್ಯಾನೆಜ್‌ಮೆಂಟ್ ಹೀಗೆ, ಡಿ.ಡಿ.ಪಿ.ಐ. ವರದಿ ಹೀಗೆ ಎಂದರೆ, you must take very serious action on this. ಇದಕ್ಕೆ ಮಾನ್ಯ ಮಂತ್ರಿಯವರು ಏನು ಉತ್ತರವನ್ನು ಕೊಡುತ್ತೀರೋ ಕೊಡಿ ಸ್ವಾಮಿ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೇ ಈಗ ತಮಗೆಲ್ಲಾ ಗೊತ್ತಿರುವ ಹಾಗೆ ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸಲಾಗಿದೆ. 40 ಜನ ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯರೆಂಬ ಅನುಪಾತದ ಮೇಲೆ ಈ ಕ್ರಮವನ್ನು ಮಾಡುತ್ತಿದ್ದೇವೆ. ಆದರೆ ನಾವು ಈ ಪ್ರೈವೇಟ್ ಮ್ಯಾನೇಜ್‌ಮೆಂಟ್‌ನಿಂದ ನಡೆಯುವಂತಹ ಶಾಲೆಗಳಲ್ಲಿ, ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾದಾಗ ನಾವು ಹಣವನ್ನು ಕೊಡುವುದಿಲ್ಲ. ಅದಕ್ಕೆ ಅಲ್ಲಿರುವಂತಹ ಶಾಲಾ